ಬಂದಿದ್ದರಿಂದ ಕೈಬಿಡಲಾಗಿದೆ ಎಂದು ಹೇಳಿದ್ದೀರಿ. ಇವರು ಯಾವರೀತಿಯಲ್ಲಿ ಅನರ್ಹರಾಗಿದ್ದಾರೆ ಎನ್ನುವುದನ್ನು ತಿಳಿಸಬೇಕು. ಮುಂದೆ ತಮ್ಮ ಉತ್ತರದಲ್ಲಿ ೫೭.೧೬೯ ಜನರಲ್ಲಿ ೪೧,೦೮೨ ಜನರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಇನ್ನುಳಿದ ೧೬,೦೮೭ ಜನರಿಗೆ ಪುನರ್ವಸತಿ ಕಲ್ಪಿಸಬೇಕಾಗಿರುತ್ತದೆ ಎಂದು ಹೇಳಿದ್ದೀರಿ. ಜೀತದಾಳುಗಳು ಶೇಕಡ ೪೦ ರಷ್ಟು ಜನರು ಮೈಸೂರಿನಲ್ಲೇ ಇರುವುದರಿಂದ, ಅವರಿಗೆ ವಸತಿ ಕಲ್ಪಿಸಬೇಕಾದುದು ಅವಶ್ಯ ಇದೆ, ಈ ಬಗ್ಗೆ ಅವರಿಗೆ ದಯಮಾಡಿ ಯಾವಾಗ ವಸತಿ ಕಲ್ಪಿಸಿಕೊಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸದಸ್ಯರು ಯಾವರೀತಿಯಲ್ಲಿ ಅನರ್ಹರಾಗಿದ್ದಾರೆಂದು ಕೇಳಿದರು. ಜೀತದಾಳುಗಳ ಪಟ್ಟಿಯನ್ನು ತಯಾರು ಮಾಡಿದಮೇಲೆ ಆ ಪಟ್ಟಿಯನ್ನು ಪರಿಷ್ಕೃತ ಗೊಳಿಸಿ ಅವರಿಗೆ ಪರಿಹಾರ ಕೊಡಬೇಕೆಂದು ಹೊರಟಾಗ ಆ ಪಟ್ಟಿಯಲ್ಲಿ ಇರತಕ್ಕವರು ಕೆಲವರು ಇಲ್ಲ ಎನ್ನುವಂಥ ದೂರುಗಳು ಬಂದಿದ್ದರಿಂದ, ಆಗ ಗ್ರಾಮ ಸಭೆಯಲ್ಲಿ ಇದ್ದಾರೋ ಇಲ್ಲವೋ ಎನ್ನುವುದನ್ನು ನೋಡಿ ಪರಿಷ್ಕೃತ ಪಟ್ಟಿಯನ್ನು ತಯಾರು ಮಾಡಬೇಕೆಂದು ಹೇಳಿದಾಗ ೫,೫೨೦ ಜನರು ಅನರ್ಹರು ಎಂದು ಕಂಡುಬಂತು. ಇದು ಹೇಗೆ ಆಗಿದೆ ಅಂದರೆ. ಕೆಲವುಕಡೆ ಎರಡೆರಡು ಹೆಸರುಗಳು ಇವೆ, ಕೆಲವರು ಊರು ಬಿಟ್ಟು ಹೋಗಿದ್ದಾರೆ, ಕೆಲವರು ಸತ್ತು ಹೋಗಿದ್ದಾರೆ. ಈ ರೀತಿಯಲ್ಲಿ ಅನರ್ಹರಾಗಿರುವುದು ಕಂಡುಬಂದಿದೆ. ಇಡೀ ರಾಜ್ಯದಲ್ಲಿ ೬೦ ಪರ್ಸೆಂಟ್ ಇದ್ದರೆ ಮೈಸೂರು ಜಿಲ್ಲೆಯಲ್ಲಿ ೪೦ ಪರ್ಸೆಂಟ್ ಜೀತದಾಳುಗಳಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಇರತಕ್ಕ ೨೪ ಸಾವಿರ ಚಿಲ್ಲರೆ ಜನ ಏನಿದ್ದಾರೆ ಅವರೆಲ್ಲರಿಗೂ ನಾವು ಪುನರ್ವಸತಿಯನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶ ಇದೆ. ಆದರೆ ಇದಕ್ಕೆ ಕೇಂದ್ರ ಸರ್ಕಾರದಿಂದ ಹಣ ಸಹಾಯ ಬರಬೇಕಾಗುತ್ತದೆ. ಅವರ ವಾರ್ಷಿಕ ಗುರಿಗನುಗುಣ ವಾಗಿ ನಾವೂ ಕೂಡ ನಮ್ಮ ರಾಜ್ಯದ ಜಿಲ್ಲೆಗಳಲ್ಲಿ ನಮ್ಮ ಗುರಿಯನ್ನು ನಿಗದಿ ಮಾಡಿಕೊಳ್ಳುತ್ತೇವೆ. ಕೇಂದ್ರ ಸರ್ಕಾರದವರು ಈ ಒಂದು ಸಲಹೆಗೆ ಒಪ್ಪುವುದಾದರೆ ೧೯೮೮-೮೯ನೇ ಸಾಲಿನಲ್ಲಿಯೇ ರಾಜ್ಯ ದಲ್ಲಿ ಇರತಕ್ಕ ಎಲ್ಲಾ ಜೀತದಾಳುಗಳಿಗೂ ಪುನರ್ವಸತಿಯನ್ನು ನಾವು ಕಲ್ಪಿಸಿಕೊಡುತ್ತೇವೆ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಜೀತದಾಳುಗಳಿಗೆ ಚರಾಸ್ತಿಯನ್ನು ವಿತರಣೆ ಮಾಡುವಾಗ ಅನೇಕ ರೀತಿಯ ದುರುಪಯೋಗಗಳಾಗಿವೆ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನೀವು ಚರಾಸ್ತಿಗಳನ್ನು ಹಂಚುವಾಗ ಜೀತಮುಕ್ತರ ಸುತ್ತಮುತ್ತ ಇರತಕ್ಕವರಿಗೆ ಅಂದರೆ ಕೆಲವರಿಗೆ ಮಾತ್ರ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ನೀವು ಚರಾಸ್ತಿಯನ್ನು ಕೊಡುವುದಕ್ಕೆ ಬದಲಾಗಿ ಸ್ಥಿರಾಸ್ತಿ ಯನ್ನು ವಿತರಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ? ಏಕೆಂದರೆ ಬಿ.ಡಿ.ಓ.ಗಳು ಹೆಚ್ಚು ಹೆಚ್ಚು ಹಣವನ್ನು ಕೊಟ್ಟು ತಮಗೆ ಬೇಕಾದ ಒಳ್ಳೆಯ ಜಾಗಗಳಿಗೆ ಹಾಕಿಸಿಕೊಂಡಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಹಿಂದೆ ಅನೇಕ ರೀತಿಯ ದುರುಪಯೋಗಗಳು ಆಗಿದ್ದುದನ್ನು ವಿಚಾರಣೆ ಮಾಡಿಸಿದ್ದೇವೆ. ಇವತ್ತೂಕೂಡ ಕೆಲವುಕಡೆ ದುರುಪಯೋಗವಾಗುತ್ತಿದೆ ಎಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಮಾನ್ಯ ಸದಸ್ಯರು ಹೇಳುವಂತೆ ಬಿ.ಡಿ.ಓ.ಗಳಿಗೆ ಈಗ ಹೆಚ್ಚಿಗೆ ಸ್ವಾತಂತ್ರ್ಯವಿಲ್ಲ. ಏಕೆಂದರೆ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತಿಗಳೇ ಇದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿವೆ. ಜೀತದಾಳು ಗಳಿಗೆ ಪುನರ್ ವಸತಿಯನ್ನು ಕಲ್ಪಿಸುವಾಗ ಅವರಿಗೆ ಚರಾಸ್ತಿಯನ್ನು ಕೊಡುವುದಕ್ಕೆ ಬದಲು ಸ್ಥಿರಾಸ್ತಿಯನ್ನು ಕೊಡತಕ್ಕದ್ದು ಉತ್ತಮವಾದ ಮಾರ್ಗವೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಇನ್ನುಮುಂದೆ ಅವರು ಆ ರೀತಿ ಮಾಡಿ ಕಳುಹಿಸಿಕೊಟ್ಟರೆ ಅದಕ್ಕೆ ಕಾನೂನಿನಲ್ಲಿ ಏನಾದರೂ ಬಿಕ್ಕಟ್ಟು ಇದ್ದರೆ ಅದನ್ನು ಬಗೆಹರಿಸಿಕೊಡುತ್ತೇನೆಂದೂ ಹೇಳಬಯಸುತ್ತೇನೆ. ಇದಕ್ಕೆ ನನ್ನ ಆಭ್ಯಂತರವಿಲ್ಲ.

ಹೊಸಪೇಟೆ ಮಾರ್ಕೆಟ್ ಸಂಕೀರ್ಣ

(೬೬೩) ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ನಗರದ ಹಳೆ ಬಸ್ ನಿಲ್ದಾಣದ ಆವರಣದ ಅಂಗಡಿ ಸಂಕೀರ್ಣದಲ್ಲಿ ಕಟ್ಟುತ್ತಿರುವ ಸಣ್ಣ ಅಂಗಡಿಗಳು. ಸರ್ಕಾರ ದಿನಾಂಕ ೨೫-೪-೧೯೮೦ ಮತ್ತು ೨೧-೧೧-೧೯೮೪ ರಲ್ಲಿ ಹೊರಡಿಸಿರುವ

ಆದೇಶವಷ್ಟು ಐಡಿಎಸ್‌ಎಂಟಿ ಮತ್ತು ಒಡಿಪಿ ಯೋಜನೆಗೆ ಮತ್ತು ಮಂಜೂರಾಗಿರುವ ನಕಾಶೆಯಂತೆ ಅನುಸರಿಸುತ್ತದೆಯೇ;

ಆ) ಅಂಗಡಿ ಯೋಜನೆಯ ಒಟ್ಟು ವೆಚ್ಚ;

ಇ) ವ್ಯವಸಾಯ ಸಾಮಗ್ರಿಗಳ ಸಣ್ಣ ವ್ಯಾಪಾರಸ್ಥರಿಗೆ ಈ ಅಂಗಡಿಗಳನ್ನು ಹಂಚಲಾಗಿದೆಯೆ;

ಈ) ಹಾಗಾದರೆ ಯಾವಾಗ ಮತ್ತು ಅದರ ಬಾಡಿಗೆ ಮತ್ತು ಷರತ್ತುಗಳೇನು (ಹಂಚಿಕೆದಾರರ ಹೆಸರುಗಳನ್ನು ಪಟ್ಟಿ ಸಮೇತ)

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಯೋಜನಾ ವರದಿಯ ರೀತ್ಯಾ ೧೨೮ ಎ.ಸಿ. ಛಾವಣಿ ಮುಚ್ಚಿರುವ ತೆರೆದ ಮಳಿಗೆಗಳನ್ನು ೪ ವಿಭಾಗಗಳಲ್ಲಿ (Blocks) ಕಟ್ಟತಕ್ಕದ್ದಾಗಿರುತ್ತದೆ. ಒಂದು ವಿಭಾಗದ ಅಂದಾಜು ಬಳ್ಳಾರಿ ಲೋಕೋಪಯೋಗಿ ಇಲಾಖೆ ಸೂಪರಿಂಟೆಂಡೆಂಟ್ ಇಂಜಿನೀಯರ್‌ರವರಿಂದ ಮಂಜೂರಾಗಿರುತ್ತದೆ. ಆದರೆ ದಿನಾಂಕ ೬-೮-೧೯೮೪ರ ನಗರಸಭೆಯ ನಡೆವಳಿಯಲ್ಲಿ ಆರ್.ಸಿ.ಸಿ. ಛಾವಣಿಯುಳ್ಳ ರೋಲಿಂಗ್ ಬಾಗಿಲು ಮುಚ್ಚಿದ ೧೦೪ ಮಳಿಗೆಗಳನ್ನು ಕಟ್ಟುವಂತೆ ತೀರ್ಮಾನಿಸಲಾಗಿದೆ.

ಆ) ಯೋಜನಾ ವರದಿಯಲ್ಲಿ ಒಟ್ಟು ವೆಚ್ಚ ರೂ. ೯,೬೩,೦೦೦.೦೦ ಅಳವಡಿಸಲಾಗಿದೆ.

ಇ) ಇಲ್ಲ. ಹಳೆ ಬಸ್ ನಿಲ್ದಾಣದ ಒನೇ ವಾರ್ಡಿನಲ್ಲಿ ತೆರೆದ ಮೈದಾನದಲ್ಲಿ ವ್ಯಾಪಾರ ಮಾಡುತ್ತಿರುವ ಸಣ್ಣ ವ್ಯಾಪಾರಸ್ಥರಿಗೆ ಕಾನೂನು ರೀತ್ಯಾ ಪರಿಶೀಲಿಸಿ ಹಂಚುವಂತೆ ಸೂಕ್ತ ತಿಳುವಳಿಕೆಯನ್ನು ಆಯುಕ್ತರಿಗೆ ನೀಡಿರುತ್ತದೆ.

ಈ) ಅನ್ವಯಿಸುವುದಿಲ್ಲ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ವಿಜಯನಗರ ಪ್ಲಾನಿಂಗ್ ಅಥಾರಿಟಿ ಎಂದು ಇದೆ, ಮತ್ತು ಇಂಪ್ರೂವ್‌ಮೆಂಟ್ ಬೋರ್ಡ್ ಎಂದು ಒಂದು ಇದೆ. ಇವರು ವರದಿ ಮಾಡಿರುವ ರೀತಿ ಎಲ್ಲಿ ಈ ಕಾಯಿಪಲ್ಲೆ ಮಳಿಗೆಗಳನ್ನು ಕಟ್ಟಲಾಗಿದೆ, ಅಲ್ಲಿ ಹೆಚ್ಚಿನ ವಾಹನಗಳು ಓಡಾಡುತ್ತಿವೆ. ಆ ವಾಹನಗಳ ಓಡಾಟಕ್ಕೆ ಬಹಳಷ್ಟು ಅಡಚಣೆಯಾಗುತ್ತಿದೆ. ನಾನು ಹೇಳುವುದನ್ನು ನಂಬದಿದ್ದರೆ ಅವರು ಹೊಸಪೇಟೆಗೆ ಬರುವುದಾದರೆ ಬರಲಿ, ನಾನೂ ಬರುತ್ತೇನೆ. ಪ್ಲಾನಿಂಗ್ ಅಥಾರಿಟಿಯವರು ಸರಿಯಾಗಿ ಪ್ಲಾನ್ ಮಾಡಿಲ್ಲ. ಇವರು ರೊಕ್ಕವನ್ನು ಕೊಟ್ಟಿರುವುದರಿಂದ ಅವರು ಶಾಮಿಲಾಗಿ ಈ ರೀತಿ ಮಾಡುತ್ತಿದ್ದಾರೆಂದು ನಾನು ಹೇಳಬಯಸುತ್ತೇನೆ. ಸರ್ಕಾರದವರು ಈಗಲಾದರೂ ಇದನ್ನು ಪುನರ್ ಪರಿಶೀಲನೆ ಮಾಡುತ್ತಾರೆಯೆ?

ಶ್ರೀ ಎಂ. ಚಂದ್ರಶೇಖರ್ —ಮಾನ್ಯ ಅಧ್ಯಕ್ಷರೆ, ಅಲ್ಲಿ ಈಗಾಗಲೇ ೩-೪ ಅಂಗಡಿಗಳನ್ನು ಕಟ್ಟಿದ್ದು ಆಗಿದೆ. ಈ ಹಂತದಲ್ಲಿ ಅದನ್ನು ಪುನರ್ ಪರಿಶೀಲನೆ ಮಾಡುವುದು ಬಹಳ ಕಷ್ಟವಾಗುತ್ತದೆ. ಈ ಅಂಗಡಿಗಳನ್ನು ಕಟ್ಟುವುದಕ್ಕೆ ಮುಂಚಿತವಾಗಿಯೇ ಆಗಿದ್ದರೆ ಆ ಸ್ಥಳವನ್ನು ಬದಲಾವಣೆ ಮಾಡಬಹುದಾಗಿತ್ತು. ಆದರೆ ಈಗಾಗಲೇ ೩-೪ ಮಳಿಗೆಗಳನ್ನು ಕಟ್ಟಿದ್ದಾಗಿದೆ. ಅವರು ಪ್ರಾಧಿಕಾರದ ಒಪ್ಪಿಗೆಯನ್ನು ತೆಗೆದುಕೊಂಡು ಮಾಡಿದ್ದಾರೆಯೇ, ಅಥವಾ ಇಲ್ಲವೇ ಎಂಬುದನ್ನು ನೋಡಬಹುದು.

ಶ್ರೀ ಎಂ. ರಾಮಪ್ಪ.—ಯೋಜನಾ ಆಯೋಗದವರು ಇದರಲ್ಲಿ ತಪ್ಪು ಮಾಡಿದ್ದರೆ ಅವರ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಕೇಳಬಯಸುತ್ತೇನೆ. ನಾನು ವಿತಕ್ಕೆ ಈ ರೀತಿ ಕೇಳುತ್ತಿದ್ದೇನೆಂದರೆ, ಯಾರಾದರೂ ಒಬ್ಬ ವ್ಯಕ್ತಿ ತನ್ನ ಮನೆಯನ್ನು ಕಟ್ಟಿಕೊಳ್ಳಬೇಕೆಂದು ಅರ್ಜಿಯನ್ನು ಕೊಟ್ಟರೆ, ಆ ಮನೆಯನ್ನು ಕಟ್ಟಬೇಕಾದರೆ ರಸ್ತೆಯಿಂದ ಇಷ್ಟು ಅಡಿ ದೂರ ಜಾಗವನ್ನು ಬಿಡಬೇಕು, ಮನೆಯ ಹಿಂದೆ ಇಷ್ಟು ಜಾಗ ಬಿಡಬೇಕು ಅಲ್ಲಿ ಅಷ್ಟು ಬಿಡಬೇಕು, ಇಲ್ಲಿ ಇಷ್ಟು ಬಿಡಬೇಕೆಂದು ಹೇಳುತ್ತಾರೆ. ಆದರೆ ಇವರೇ ತಪ್ಪು ಮಾಡಿದ್ದರೆ ಏನು ಮಾಡುತ್ತೀರಿ?

ಶ್ರೀ ಎಂ. ಚಂದ್ರಶೇಖರ್.—ಈ ಬಗ್ಗೆ ವಿಚಾರಣೆ ಮಾಡಿಸಿ ವರದಿಯನ್ನು ತರಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ವಿಚಾರಣೆ ಮಾಡುತ್ತೇವೆಂದರೆ ತನಿಖೆಯಾಗುತ್ತದೆ. ಆದ್ದರಿಂದ ತನಿಖೆ ಯಾವ ರೀತಿ ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ವಿಚಾರಣೆ ಎಂದರೆ ಈಗ ಮಾಡಿರುವುದು ಕಾನೂನು ಬದ್ಧವಾಗಿ ಮಾಡಿರುತ್ತಾರೆಯೇ ಇಲ್ಲವೇ ಏನನ್ನುವುದನ್ನು ವಿಚಾರಣೆ ಮಾಡುವುದು. ಕಾನೂನು ಬದ್ಧವಾಗಿ ಮಾಡದಿದ್ದ ಪಕ್ಷದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ರಾಮಪ್ಪ.—ವಿಚಾರಣೆ ಮಾಡುವ ಸಂದರ್ಭದಲ್ಲಿ ನಿಮ್ಮ ನಿಮ್ಮಲ್ಲಿಯೇ ವಿಚಾರಣೆ ಮಾಡಿಕೊಳ್ಳುವುದು ಸರಿಯಲ್ಲ. ನಮ್ಮನ್ನೂ ಕರೆಯಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಆ ಕಡೆ ನೀವು ನಾವು ಹೋಗೋಣ.

MR. SPEAKER.—Hon'ble Minister may take him into confidence.

SRI M. CHANDRASEKHAR.—I have already taken.

ಮಂಗಳೂರಿನ ಉಳ್ಳಾಲ ಕ್ಷೇತ್ರದಲ್ಲಿ ಬರುವ ಕೆಲವು ನಗರಾಸ್ತಿಯ ಬಗ್ಗೆ

೧೨೬೪. ಶ್ರೀ ಇದಿನಬ್ಬ (ಉಳ್ಳಾಲ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಳ್ಳಾಲ ಕ್ಷೇತ್ರದ ಕೆಲವು ಗ್ರಾಮಗಳಲ್ಲಿ, ಅರ್ಬನ್ ಸೀಲಿಂಗ್ ಕಾನೂನು ಜಾರಿಯಲ್ಲಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಆ ಕಾನೂನಿನಂತೆ ಪ್ರತಿಯೊಬ್ಬರೂ ೦೪ ಸೆಂಟ್ಸ್ ಭೂಮಿಯನ್ನು ಮಾತ್ರ ಇಟ್ಟುಕೊಳ್ಳಬಹುದಲ್ಲವೇ.?

ಇ) ಹಾಗಿರುವಾಗ ಎಷ್ಟು ಜನರು ತಮ್ಮ ಜಮೀನುಗಳಿಗೆ ವಿನಾಯಿತಿ ಪಡೆದುಕೊಂಡಿದ್ದಾರೆ.

ಈ) ವಿನಾಯಿತಿ ಪಡೆದವರು ಜಮೀನು ಮಾರಾಟ ಮಾಡಬಹುದಲ್ಲವೇ ಆ ರೀತಿ ಮಾರಾಟ ಆಗಿರುವ ಸಂದರ್ಭಗಳಲ್ಲಿ ಸರ್ಕಾರದವರ ನಿಲುವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು

ಆ) ಹೌದು

ಇ) ಉಳ್ಳಾಲ ಕ್ಷೇತ್ರದಲ್ಲಿ ಬರುವ ನಗರಾಸ್ತಿ ಪ್ರದೇಶಕ್ಕೆ ಸಂಬಂಧಿಸಿರುವಂತೆ ೧೧೦ ಪ್ರಕರಣಗಳಲ್ಲಿ ವಿನಾಯಿತಿ ಪಡೆದುಕೊಂಡಿದ್ದಾರೆ,

ಈ) ಸರ್ಕಾರದ ಆದೇಶದಲ್ಲಿ ವಿನಾಯ್ತಿ ಹಾಗೂ ಮಾರಾಟ ಮಾಡಲು ಪರವಾನಗಿ ಕೊಟ್ಟಲ್ಲಿ ಸದರಿ ಜಮೀನನ್ನು ಮಾರಾಟ ಮಾಡಬಹುದಾಗಿದೆ. ಜಮೀನು ಒಡೆಯರು ಇಟ್ಟುಕೊಳ್ಳಲು ಮಾತ್ರ ವಿನಾಯ್ತಿ ನೀಡಿದ್ದಲ್ಲಿ ಮಾರಾಟ ಮಾಡುವ ಹಾಗಿಲ್ಲ. ಹಾಗೇನಾದರೂ ಸರ್ಕಾರ ಆದೇಶದ ಷರತ್ತುಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ ವಿನಾಯ್ತಿ ನೀಡಿರುವ ಆದೇಶವನ್ನು ಹಿಂತೆಗೆದುಕೊಂಡು ನಗರ ಭೂ ಪರಿಮಿತಿ ಕಾಯ್ದೆ, ೧೯೭೬ರ ಅನ್ವಯ ಆ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಗ್ರಾಮಾಂತರ ಪ್ರದೇಶದ ಒಳಗಿನ ಪ್ರದೇಶಗಳಲ್ಲಿ ೪೯ ಸೆಂಟ್ಸ್ ಭೂಮಿಯನ್ನು ಇಟ್ಟುಕೊಳ್ಳಲು ಆಜ್ಞೆ ಇದ್ದರೂ ಸಹ ಶ್ರೀಮಂತರಿಗೆ ವಿನಾಯಿತಿಯನ್ನು ಏತಕ್ಕೆ ಕೊಟ್ಟಿರುತ್ತೀರಿ ? ಇದು ಪಕ್ಷಪಾತೀತವಲ್ಲವೆ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ನಗರಪಾಲಿಕೆ ಪ್ರದೇಶಕ್ಕೆ ಇದು ಅನ್ವಯವಾಗುತ್ತದೆ ಬೆಂಗಳೂರಿನಲ್ಲಿ ೫೦ ಕಿಷ್ಟು ಎಂದು ಮಿತಿ ಇರುತ್ತದೆ. ಮಂಗಳೂರು ಪ್ರಾಧಿಕಾರ ಪ್ರದೇಶದ ಸಮೀಪದಲ್ಲಿ ಉಳ್ಳಾಲ ಬರುತ್ತದೆ. ೪೯ ಸೆಂಟ್ಸ್ ಅಂದರೆ ಸುಮಾರು ಎರಡು ಸಾವಿರ ಚದುರು ಮೀಟರ್‌ಗಳಷ್ಟು ಖಾಲಿ ನಿವೇಶನಗಳನ್ನು ಇಟುಕೊಳ್ಳಬಹುದು. ಮನೆ